ಸ್ವೀಕರಿಸುತ್ತಿದ್ದಾಗ ಆಶ್ಚರ್ಯಚಕಿತರಾಗಿ ನೋಡುತ್ತಾರೆ, ಅಂದು ಪ್ರಸಾದದಲ್ಲಿ ಪಿಠಾ ಕೂಡ ಇತ್ತು. ಅಷ್ಟೇ ಅಲ್ಲ , ಪಿಠಾ ಬಡಿಸು ತ್ತಿದ್ದಾಗ ಅವರ ಎಲೆಗೇ ಮೊದಲು ಬಡಿಸಲಾಯಿತು. ವಿಸ್ಮಯ ಹಾಗೂ ಆನಂದದಿಂದ ಭಕ್ತರ ಹೃದಯ ತುಂಬಿಬಂತು, ಕಣ್ಣುಗಳಲ್ಲಿ ನೀರು ತುಂಬಿಬಂತು.

* * *

ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮೀಜಿಯವರ ಆದರ್ಶ ಗಳಿಂದ ಆಕರ್ಷಿತರಾದ ಭಕ್ತರುಗಳು ಸೇರಿಕೊಂಡು ಶಿಲ್ಲಾಂಗ್‌ನಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ಅಲ್ಲಿ ನಿಯತವಾಗಿ 'ಶ್ರೀರಾಮ ಕೃಷ್ಣ ಕಥಾಮೃತ'ದ (ವಚನವೇದ) ವಾಚನ, ಭಕ್ತಿ ಸಂಗೀತ ಇತ್ಯಾದಿ ಗಳು ನಡೆಯುತ್ತಿದ್ದವು. ಒಂದು ಸಲ ಅವರು ಅಖಂಡ ಮಾತೃ- ಸಂಗೀತವನ್ನು ಹಾಡಲಾರಂಭಿಸಿದರು. ಆಗ ಶ್ರೀಮಾತೆಯವರು ಉದ್ಬೋಧನದಲ್ಲಿದ್ದರು. ಅವರು ಏನನ್ನೂ ಶ್ರೀಮಾತೆಯವ ರಿಗೆ ತಿಳಿಸಿರಲಿಲ್ಲ. ಎರಡು-ಮೂರು ದಿನಗಳಿಂದ ಸಾಕಷ್ಟು ಮಾತೃ-ಸಂಗೀತ ಭಜನೆ ನಡೆಯುತ್ತ ಬಂದಿತ್ತು. ಅತ್ತ ಕಲ್ಕತ್ತೆ ಯಲ್ಲಿ , ಉದ್ಬೋಧನದಲ್ಲಿದ್ದ ಶ್ರೀಮಾತೆ ಹಠಾತ್ತನೆ ಚಂಚಲ ಚಿತ್ತರಾಗಿಬಿಟ್ಟರು. ಒಬ್ಬ ಸೇವಕನನ್ನು ಕರೆದು, ''ಇನ್ನು ಸಹಿಸ ಲಾರೆ. ಶಿಲ್ಲಾಂಗ್‌ನ ಭಕ್ತರು ಹಾಡುತ್ತಿರುವ ಭಜನೆ, ಕೀರ್ತನೆ ನನ್ನ ಕಿವಿಯನ್ನು ಕಿವುಡಾಗಿಸಿಬಿಟ್ಟಿದೆ! ಅವರಿಗೆ ನಿಲ್ಲಿಸುವುದಕ್ಕೆ ಹೇಳು. ~~ಟೆಲಿಗ್ರಾಂ ಕಳುಹಿ~~ಸು!'' ಎಂದರು.∩

∩ ಶ್ರೀಮಾತೆಯವರ ಶಿಷ್ಯ ಶ್ರೀಶಚಂದ್ರ ಸನ್ಯಾಲರು ಈ ಲೇಖನ ವನ್ನು ೧೯೬೫ರ ಜುಲೈ ೨೧ರಂದು 'ಮಾಯೇರ್ ಪದಪ್ರಾಂತೇ'

# ಶ್ರೀಮಾತೆಯವರ ಕರುಣೆ

**ಧೀರೇಂದ್ರಕುಮಾರ ಗುಹ ಠಾಕೂರತಾ**

ಕ್ರಿ.ಶ.೧೯೧೯ರ ಜನವರಿ ೨ನೇ ತಾರೀಕು. ಬೇಲೂರು ಮಠ ದಲ್ಲಿ ಪೂಜ್ಯ ಬಾಬುರಾಮ ಮಹಾರಾಜರು ಕೃಷ್ಣಲಾಲ್ ಮಹಾ ರಾಜರಿಗೆ (ಸ್ವಾಮಿ ಧೀರಾನಂದ) ಹೇಳಿದರು: ''ಕೇಷ್ಟೊಲಾಲ್ ∩ ಧೀರೇನ್‌ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗಿ, 'ಬಲಿ' ಕೊಟ್ಟು ಕರೆದುಕೊಂಡು ಬಾ.'' ನನಗೆ ತಂದೆಯಿಲ್ಲ , ತಾಯಿ ಕೂಡ ಬಹಳ ದಿನಗಳ ಮುನ್ನ ತೀರಿಕೊಂಡಿದ್ದರು. ನನಗೆ ಯಾವುದರಲ್ಲೂ ಆಸಕ್ತಿಯಿಲ್ಲ. ನನ್ನ ಮನಸ್ಸಿನಲ್ಲಿ ಒಂದೇ ಆಲೋ ಚನೆ — ಎಲ್ಲಿಗೆ ಹೋಗಲಿ, ಕಳೆದುಕೊಂಡ ತಾಯಿಯನ್ನು ಹೇಗೆ ಪಡೆಯಲಿ ಎಂದು. ತಾಯಿಯಿಲ್ಲದ ಹುಡುಗನ ಮರ್ಮವೇದನೆ ಯಾರಿಗೂ ಅರ್ಥವಾಗದು.

ನಿಜಕ್ಕೂ 'ಬಲಿ' ಅದು. ನಾವು ಪೂರ್ವ ಬಂಗಾಳ (ಈಗಿನ ಬಾಂಗ್ಲಾದೇಶ) ದವರು. ನನ್ನ ಮನೆಯಿದ್ದುದು ಬರಿಸಾಲ್‌ನಲ್ಲಿ. ಆದ್ದರಿಂದ 'ಬಲಿ'ಯ ಪರಿಚಯ ನನಗೆ ಚೆನ್ನಾಗಿ ಇತ್ತು. ಸರಸ್ವತೀ ಪೂಜೆಯಂದೂ ಕೂಡ ಆಡನ್ನು ಬಲಿಕೊಡುತ್ತಾರೆ.

'ಉದ್ಬೋಧನ'ದ ಮೆಟ್ಟಿಲುಗಳನ್ನು ಏರುತ್ತ ಮೇಲಂತಸ್ತಿಗೆ ಹೋದೆ. ಪೂಜ್ಯ ಶರತ್ ಮಹಾರಾಜ್ ಡೆಸ್ಕಿನ ಮುಂದೆ ಕುಳಿತು ಏನೋ ಬರೆಯುತ್ತಿದ್ದರು. ನಾನು ಮೆಟ್ಟಿಲಿನ ಬಳಿಗೆ ಹೋಗು ತ್ತಿದ್ದಂತೆಯೆ, ನನ್ನನ್ನು ಕರೆದು ಹೇಳಿದರು: ''ಯಾರು ಅದು? ಶ್ರೀಮಾತೆಯವರ ಆರೋಗ್ಯ ಚೆನ್ನಾಗಿಲ್ಲ. ಹೋಗಬೇಡ.'' ಆದರೆ ಅವರು ನನ್ನನ್ನು ತಡೆಯಲು ಅದೆಷ್ಟು ಯತ್ನಿಸಿದರೂ, ನಾನು ಅವರನ್ನು ಬದಿಗೆ ತಳ್ಳಿ ಶ್ರೀಮಾತೆಯವರ ಬಳಿಗೆ ಹೋದೆ, 'ಉದ್ಬೋಧನ'ದ ದೇವರಕೋಣೆಯಲ್ಲಿ ಶ್ರೀಮಾತೆ ಕುಳಿತು ಪೂಜೆ ಮಾಡುತ್ತಿದ್ದರು. ನನ್ನನ್ನು ನೋಡಿದ ಕೂಡಲೇ ನಾನು ದೀಕ್ಷೆಗಾಗಿ ಬಂದಿರುವುದಾಗಿ ಅವರಿಗೆ ತಿಳಿಯಿತು. ಅವರು ಸ್ವಲ್ಪ ನಗುತ್ತ, 'ನಾಳೆ ಬಾ' ಎಂದರು.

ಮರುದಿನ ಜನವರಿ ೩. ಸ್ನಾನ ಮುಗಿಸಿ ಹೊರಟೆ. ಶ್ರೀಮಾತೆ ತಮ್ಮ ಎಡಭಾಗದಲ್ಲಿದ್ದ ಆಸನದಲ್ಲಿ ಕುಳಿತು ಕೊಳ್ಳಲು ನನಗೆ ಹೇಳಿದರು. ಈ ಪ್ರದೇಶದಲ್ಲಿ ನವವಧುವನ್ನು ಕರೆಸಿಕೊಳ್ಳುವಾಗ ಇತ್ಯಾದಿ ಸಂದರ್ಭಗಳಲ್ಲಿ ಹೆಂಗಸರು ಹೇಗೆ ಗಲ್ಲವನ್ನು ಸ್ಪರ್ಶಿಸಿ ಚುಂಬಿಸುತ್ತಾರೋ, ಹಾಗೆ ಶ್ರೀಮಾತೆ ನನ್ನ ಗಲ್ಲವನ್ನು ಸ್ಪರ್ಶಿಸಿ ಚುಂಬಿಸಿದರು; ಅನಂತರ ನನಗೆ ಗಂಗಾ ಜಲ ಸಿಂಪಡಿಸಿದರು. ನಾನು ಶ್ರೀಮಾತೆಯವರು ಮಾಡುತ್ತಿದ್ದ ಪೂಜೆಯನ್ನು ಮಂತ್ರಮುಗ್ಧನಾಗಿ ನೋಡಿದೆ: ಎದುರಿಗೆ ನೈವೇದ್ಯದ ತಟ್ಟೆ , ಹಣ್ಣುಹಂಪಲು, ಹೂಗಳು ಇದ್ದವು. ಸ್ವಲ್ಪ ಹೊತ್ತು ಶ್ರೀಮಾತೆ ಧ್ಯಾನ ಮಾಡಿ, ನಂತರ ನನ್ನತ್ತ ಪ್ರಸನ್ನ ದೃಷ್ಟಿಯಿಂದ ನೋಡುತ್ತ ಹೇಳಿದರು: ''ನೀವು ಶಾಕ್ತರೆ, ವೈಷ್ಣ ವರೆ?'' ''ನನಗೆ ಆರು ವರ್ಷವಾಗಿದ್ದಾಗ ನನ್ನ ತಾಯಿ ತೀರಿ ಕೊಂಡರು, ಹದಿನಾಲ್ಕನೇ ವಯಸ್ಸಿನಲ್ಲಿ ತಂದೆ ತೀರಿಕೊಂಡರು — ಹಾಗಾಗಿ ಅದೆಲ್ಲ ನನಗೆ ಗೊತ್ತಿಲ್ಲಮ್ಮಾ. ಆದರೆ ನನ್ನ ತಾಯಿ ತೀರಿಕೊಂಡಾಗ ಅವರ ತಲೆಯ ಬಳಿ ನನ್ನ ತಂದೆ ಕಾಳಿಯ ಮೂರ್ತಿಯನ್ನು ಇಟ್ಟಿದ್ದರು'' ಎಂದೆ. ಶ್ರೀಮಾತೆ ಯವರಿಗೆ ಅರ್ಥವಾಯಿತು. ನನ್ನ ಗಲ್ಲದ ಮೇಲೆ ಕೈಯ

---

∩ ಬಂಗಾಳಿಯಲ್ಲಿ 'ಕೃಷ್ಣ' ಎನ್ನುವುದನ್ನು ಆಡುಮಾತಿನಲ್ಲಿ 'ಕೇಷ್ಟೋ' ಎನ್ನುತ್ತಾರೆ, ಕನ್ನಡದಲ್ಲಿ 'ಕಿಟ್ಟಿ' ಎಂದಂತೆ. *( - ಅನು.)*

ದರು. ನನ್ನ ಕಾಲಿನಿಂದ ತಲೆಯವರೆಗೂ ವಿದ್ಯುತ್ತಿನ ತರಂಗಗಳೇ ಹರಿದಾಡಿದಂತಾಯಿತು. ಆ ಆನಂದದ ಅನುಭೂತಿ ಕೇವಲ ಅನುಭವಕ್ಕೆ ಮಾತ್ರ ನಿಲುಕುವಂತಹದು; ವರ್ಣನೆಗೆ ನಿಲುಕಲಾರದು. ಅನಂತರ ಅವರು ಕರಜಪ ಮಾಡುವ ವಿಧಾನವನ್ನು ತೋರಿಸಿಕೊಟ್ಟರು. ನಾನು ಮರೆಯುತ್ತಿದ್ದೆ, ಶ್ರೀಮಾತೆಯವರಿಗೆ ಏನೂ ಹೇಳದೆ ಸುಮ್ಮನೆ ಅವರನ್ನು ನೋಡುತ್ತ ಕುಳಿತೆ. ಅವರು ಮತ್ತೆ ತೋರಿಸಿಕೊಟ್ಟರು. ಮತ್ತೆ ನನಗೆ ಮರೆತುಹೋಯಿತು. ಅವರು ಮತ್ತೊಮ್ಮೆ ನನಗೆ ತೋರಿಸಿಕೊಟ್ಟರು — ಕರುಣಾಮಯಿ ಅವರು.

ದೀಕ್ಷೆಯ ನಂತರ ಶ್ರೀಮಾತೆ ಕೈನೀಡಿ ಕೇಳಿದರು, ಗುರುದಕ್ಷಿಣೆಗಾಗಿ. ನನ್ನ ಜೇಬಿನಲ್ಲಿ ಏನೂ ಇಲ್ಲವೆಂಬುದನ್ನು ತಿಳಿದು, ಶ್ರೀಮಾತೆ ನೈವೇದ್ಯದ ತಟ್ಟೆಯಿಂದ ಒಂದು ಹಣ್ಣನ್ನು ತೆಗೆದುಕೊಂಡು ನನ್ನ ಕೈಗೆ ಕೊಟ್ಟು ಹೇಳಿದರು: ''ಹೇಳು, ನನ್ನ ಇಹಕಾಲ, ಪರಕಾಲಗಳ ಪಾಪಪುಣ್ಯಗಳನ್ನೆಲ್ಲ ನಿಮಗೆ ಕೊಟ್ಟುಬಿಟ್ಟೆ'' ಅಂತ. ನಾನಂದೆ, ''ಅಮ್ಮಾ, ಮಗನಾದವನು ತಾಯಿಗೆ ಒಳ್ಳೆಯ ವಸ್ತುಗಳನ್ನೇ ಕೊಡುತ್ತಾನೆ. ನಾನು ಪಾಪ ಗೀಪ ಇವನ್ನೆಲ್ಲ ನಿಮಗೆ ಕೊಡಲಾರೆ.'' ಅದಕ್ಕೆ ಅವರು ನಗುತ್ತ, ''ಇರು ಮಗೂ, ನೀನು ಏನೂ ಮಾಡಬೇಕಾದ್ದಿಲ್ಲ. ಬೆಳಿಗ್ಗೆ, ಸಾಯಂಕಾಲ ಜಪ ಮಾಡು. ಜಪಾತ್ ಸಿದ್ಧಿಃ, ಜಪಾತ್ ಸಿದ್ಧಿಃ'' ಎಂದರು. ನಾನು ಶ್ರೀಮಾತೆಯವರಿಗೆ ಹೇಳಿದೆ, ''ನನಗೆ ಕೈಯಲ್ಲಿ ಜಪ ಮಾಡಲಾಗುತ್ತಿಲ್ಲ.'' ಶ್ರೀಮಾತೆ ಕೇಷ್ಟಲಾಲ್ (ಕೃಷ್ಣಲಾಲ್) ಮಹಾರಾಜರನ್ನು ಕರೆದು ಒಂದು ರುದ್ರಾಕ್ಷಿ ಮಾಲೆಯನ್ನು ತಂದು ಕೊಡಲು ಹೇಳಿದರು. ಈಗಲೂ ಅದೇ ನನ್ನ ನಿಧಿಯಾಗಿದೆ.

೧೯೬೦ ನೇ ಇಸವಿಯಲ್ಲಿ ನಾನು ಸೇವೆಯಿಂದ ನಿವೃತ್ತನಾದೆ. ಶ್ರೀಮಾತೆಯವರ ಕೃಪೆಯಿಂದ ನಾನು ಜೀವನದಲ್ಲಿ ಸಾಕಷ್ಟು ಗಳಿಸಿದೆ. ಅವರ ಕೃಪೆಯಿಂದ ನನ್ನ ಜೀವನದಲ್ಲಿ ಹಲವು ಶೂನ್ಯತೆಗಳು ತುಂಬಿವೆ. ಆದರೆ ಗುರುದಕ್ಷಿಣೆ ಕೊಡಲಾಗಲಿಲ್ಲ ಎಂಬ ವೇದನೆ ಇನ್ನೂ ಹೋಗಿಲ್ಲ. ನನ್ನ ಜೀವನವನ್ನೇ ಸಂಪೂರ್ಣ ಅವರಿಗೆ ಗುರುದಕ್ಷಿಣೆಯಾಗಿ ನೀಡಬೇಕೆಂಬುದೇ ನನ್ನ ಹಂಬಲ — ಅದು ನನ್ನ ಇಡೀ ಜೀವನದ ಗುರಿ. ಆದರೆ ಈ ಗುರಿಯನ್ನು ಇನ್ನೂ ಪೂರ್ಣಗೊಳಿಸಿಲ್ಲ. ಈ ಜೀವನದಲ್ಲಿ ಅದು ಸಾಧ್ಯವಾಗುವುದೋ ಇಲ್ಲವೋ ತಿಳಿಯದು.

ಕಾಮಾರಪುಕುರದ ಯೋಗಿ ಶಿವಮಂದಿರದ ಮುಂಭಾಗದಲ್ಲಿ ನಿಂತು ಗ್ಯಾರಿಸನ್ ಸಾಹೇಬ ನನ್ನನ್ನು ಕೇಳಿದ್ದ: ''ನೀವು ಶ್ರೀಮಾತೆಯವರನ್ನು ನೋಡಿದ್ದೀರಿ. ಅವರ ಮಿರಾಕಲ್ (ಪವಾಡ) ಏನನ್ನಾದರೂ ನೋಡಿದ್ದೀರಾ? ಶ್ರೀಮಾತೆಯವರ ಯಾವುದಾದರೂ ಅಸಾಧಾರಣ ಘಟನೆಯ ಬಗ್ಗೆ ಹೇಳಿ.''

ಅದಕ್ಕೆ ಹೀಗೆ ಉತ್ತರಿಸಿದ್ದೆ: ''ಸ್ವತಃ ನೀವೇ ಅವರ ಒಂದು ದೊಡ್ಡ ಮಿರಾಕಲ್. ಶ್ರೀಮಾತೆಯವರ ಕರುಣೆಗೆ ಒಂದು ಉದಾಹರಣೆ. ನಾವು ಬಹಳ ಕಡಿಮೆ ಅವಧಿಯಲ್ಲಿ, ತುಂಬ ಕಡಿಮೆ ಹಣ ಖರ್ಚುಮಾಡಿ ಕಲ್ಕತ್ತೆಯಿಂದ ಬಂದಿದ್ದೇವೆ. ನೀವಾದರೋ ಕ್ಯಾಲಿಫೋರ್ನಿಯಾದಿಂದ ಕಾಮಾರಪುಕುರಕ್ಕೆ ಬಂದುಬಿಟ್ಟಿದ್ದೀರಿ. ಇದು ಶ್ರೀಮಾತೆಯವರ ಮಿರಾಕಲ್‌ಗೆ ದೊಡ್ಡ ಒಂದು ದೃಷ್ಟಾಂತವಲ್ಲವೆ?''

ಶ್ರೀಮಾತೆಯವರ ದ್ವಾರಪಾಲಕರಾಗಿದ್ದರು ಪೂಜ್ಯ ಶರತ್ ಮಹಾರಾಜ್. ಅವರು ಹೇಳುತ್ತಿದ್ದರು, ''ನಿನ್ನ ಲೀಲೆಯನ್ನು ನೋಡಿ ಲೀಲಾಮಯನೇ ನಿಬ್ಬೆರಗಾಗಿದ್ದಾನೆ'' ಎಂದು. ಅವರ ಲೀಲೆಯನ್ನು ನೋಡಿ ನಾವೂ ಬೆರಗಾಗುವೆವು.

ರಾಮಕೃಷ್ಣ ಮಿಷನ್ನಿನ ಒಬ್ಬರು ವಿದೇಶೀ ಸಾಧುಗಳನ್ನು ನಾನು ಕೇಳಿದ್ದೆ: ''ಮಹಾರಾಜ್, ನೀವು ಏಕೆ ಜಯರಾಮಬಾಟಿಗೆ ಬಂದಿದ್ದೀರಿ?'' ಅವರು ನಗುತ್ತ, ''ನನ್ನ ಬ್ಯಾಟರಿ ಚಾರ್ಜ್ ಮಾಡಿಕೊಂಡು ಹೋಗುವುದಕ್ಕಾಗಿ'' ಎಂದಿದ್ದರು.

ಶ್ರೀಮಾತೆಯವರೇ ಹೇಳಿದ್ದರು, ''ಜಯರಾಮಬಾಟಿ ಎಂದರೆ ಶಿವಪುರಿ. ಇಲ್ಲಿ ಮೂರು ರಾತ್ರಿಗಳನ್ನು ಕಳೆದರೆ ಒಬ್ಬ ವ್ಯಕ್ತಿಯ ದೇಹ ಪರಿಶುದ್ಧವಾಗುವುದು.'' ನನ್ನನ್ನು ಯಾರಾದರೂ, 'ಅಮರನಾಥ, ಕ್ಷೀರಭವಾನಿಗೆ ಯಾತ್ರೆ ಹೋಗುತ್ತೀಯಾ?' ಎಂದು ಕೇಳಿದರೆ ನಾನು ಹೇಳುತ್ತೇನೆ, ''ಜಯರಾಮಬಾಟಿ ಎಲ್ಲ ತೀರ್ಥಗಳಲ್ಲಿ ಅತಿಶ್ರೇಷ್ಠ ತೀರ್ಥ. ಸಾಧ್ಯವಾದರೆ ಅದರ ದರ್ಶನ ಮಾಡು, ಧನ್ಯನಾಗುವೆ.''

ಸ್ವಾಮೀಜಿಯವರ ಸಹೋದರನಾದ ಮಹಿಮಬಾಬು (ಮಹೇಂದನಾಥ ದತ್ತ) ನನಗೆ ಹೇಳಿದ್ದರು, ''ನೀನು ಏನು ಬೇಕಾದರೂ ಹೇಳು, ಆದರೆ ಶ್ರೀಮಾತೆಯವರ ಮಾತನ್ನು ಚೆನ್ನಾಗಿ ವಿವೇಚಿಸಿ ಹೇಳು. ನೀನು ಅವರ ಕೃಪೆಯನ್ನು ಪಡೆದಿರುವೆ, ಅದು ನಿನಗೆ ಬೇಕಾದಷ್ಟು. ಅವರ ಬಗ್ಗೆ ಹೇಳಿದರೆ ಅದು ಕಡಿಮೆಯಾದೀತು.'' ಶ್ರೀಮಾತೆಯವರ ಬಗ್ಗೆ ಹೇಳಹೊರಟರೆ ಅದೇ ಭಯ ನನಗೆ — ಅವರ ಬಗ್ಗೆ ಹೇಳಿದ್ದು ಕಡಿಮೆಯಾದೀತು ಅಂತ.

*(ಮೂಲ ಬಂಗಾಳಿ: 'ಶ್ರೀ ಶ್ರೀ ಮಾಯೇರ್ ಪದಪ್ರಾಂತೇ' ಗ್ರಂಥ, ಸಂಪುಟ ೨. ಅನುವಾದ: ಸ್ವಾಮಿ ಜ್ಞಾನಯೋಗಾನಂದ)*

**''ಜ್ಞಾನ ಎಂದರೆ ಭಗವಂತನ ಅರಿವು. ಈ ಜ್ಞಾನ ಉಂಟಾದಾಗಲೆ ಸರಿಯಾದ ಭಕ್ತಿ ಉಂಟಾಗುವ ಸಂಭವ. ಜ್ಞಾನ ಉಂಟಾಗದಿದ್ದರೆ ಭಕ್ತಿ ಉಂಟಾಗುವುದಿಲ್ಲ. ಶುದ್ಧ ಜ್ಞಾನ, ಶುದ್ಧ ಭಕ್ತಿ ಎರಡೂ ಒಂದೇ ವಸ್ತು. ತಾಯಿಯ ಕೃಪೆಯಿದ್ದರೇ ಅದೆಲ್ಲ ಉಂಟಾಗುವ ಸಂಭವ. ಜ್ಞಾನ ಕೊಡುವ ದಾತೃವೂ ತಾಯಿಯೇ.''**

*— ಸ್ವಾಮಿ ಶಿವಾನಂದ*